‘ಥೆರಪ್ಯುಟಿಕ್’. ಒಂದು ಪಾತ್ರವಾಗುವುದು, ಆ ಪಾತ್ರವನ್ನು ಎಕ್ಸ್‌ಪ್ಲೋರ್ ಮಾಡುವುದು ನನಗೆ ಚಿಕಿತ್ಸೆಯಂತೆ. ಅದನ್ನು ಮಿಸ್ ಮಾಡಿಕೊಂಡಿದ್ದೆ.

◆ **ನಿಮ್ಮ ಸಾಮರ್ಥ್ಯವನ್ನು ಕಂಡುಕೊಳ್ಳುವ ಪಾತ್ರಗಳು ಸಿಕ್ಕಿವೆಯೇ? ಎಂಥ ಪಾತ್ರಗಳ ನಿರೀಕ್ಷೆ ನಿಮ್ಮಲ್ಲಿದೆ?**

ನನ್ನ ಕರಿಯರ್ ನೋಡಿದರೆ, ನನ್ನ ಸಾಮರ್ಥ್ಯವನ್ನು ಎಕ್ಸ್‌ಪ್ಲೋರ್ ಮಾಡಲು ಅವಕಾಶವಿರುವಂಥ ಪಾತ್ರಗಳು ಸಿಕ್ಕಿವೆ. ಕಡಿಮೆ ಅವಧಿಯಲ್ಲೂ ಪರಿಣಾಮ ಬೀರುವಂಥ ಅವಕಾಶ ಅವಾಗಿದ್ದವು.

ಈಗ, ಒಂದೆರಡಲ್ಲ, ಸಾಕಷ್ಟು ಪಾತ್ರಗಳನ್ನು ಮಾಡಬೇಕೆಂಬ ಬಯಕೆ ಇದೆ. ಬ್ರೇಕ್‌ನಲ್ಲಿ ಎಷ್ಟೊಂದು ಸಿನಿಮಾ, ಸೀರೀಸ್, ಭಿನ್ನ ಭಿನ್ನ ಕಂಟೆಂಟ್‌ಗಳನ್ನು ನೋಡಿದ್ದೇನೆ. ಮಾಡಬಹುದಾದ್ದು ತುಂಬಾ ಇದೆ. ನನ್ನ ದೃಷ್ಟಿಕೋನವೂ ಸಾಕಷ್ಟು ಬದಲಾಗಿದೆ.

◆ **ಕನ್ನಡ ಸಿನಿಮಾ ಅವಕಾಶಗಳು ಬಂದಿವೆಯೇ? ಸ್ವಯಂಭು ಹೊರತುಪಡಿಸಿ ಇನ್ನಾವ ಸಿನಿಮಾದಲ್ಲಿ ತೊಡಗಿಕೊಂಡಿದ್ದೀರಿ?**

ಒಂದೆರಡು ಸಿನಿಮಾ ಮಾತುಕತೆ ಆರಂಭವಾಗಿದೆಯಷ್ಟೆ, ಅಂತಿಮವಾಗಿಲ್ಲ. ಕನ್ನಡದಲ್ಲಿ ಅತ್ಯುತ್ತಮ ಸಿನಿಮಾದೊಂದಿಗೆ ವಾಪಸ್ ಬರಬೇಕು. ಮೊದಲ ಸಿನಿಮಾದಲ್ಲಿಯೇ ಕನ್ನಡಿಗರು ನನಗೆ ಅಷ್ಟು ಪ್ರೀತಿ ತೋರಿಸಿದ್ದಾರೆ. ನನ್ನ ಸಿನಿಮಾಗಳ ಪಾತ್ರಗಳನ್ನು, ಹಾಡುಗಳನ್ನು ಇನ್ನೂ ನೆನಪಿಟ್ಟುಕೊಂಡಿದ್ದಾರೆ. ನನ್ನ ಕಮ್‌ಬ್ಯಾಕ್ ಘೋಷಣೆಯಾದ ಮೇಲೆ ‘ಪಟಾಕಾ ಪಟಾಕಾ’ ಎಂದೇ ಪ್ರೀತಿಯಿಂದ ಕರೆಯುತ್ತಿದ್ದಾರೆ. ಇಷ್ಟು ಪ್ರೀತಿಯಿದ್ದಾಗ ಜವಾಬ್ದಾರಿಯೂ ಜಾಸ್ತಿಯೇ ಇದೆ. ಸುಮ್ಮನೆ ಬಂದು ಏನೋ ಮಾಡಿ ಹೋಗಲು ನನಗೂ ಇಷ್ಟವಿಲ್ಲ. ಜನರು ಇಷ್ಟಪಡುವಂಥ ಪಾತ್ರ ಮಾಡಬೇಕು. ಅಂಥದ್ದೊಂದು ಕಥೆ ಬಂದಾಗ ಖಂಡಿತ ಮಾಡುತ್ತೇನೆ. ಕನ್ನಡದಲ್ಲಿ ಡೈಲಾಗ್ ಹೇಳಲು, ನನ್ನ ಮಾತೃಭಾಷೆಯಲ್ಲೇ ಕೆಲಸ ಮಾಡಲು ಕಾಯುತ್ತಿದ್ದೇನೆ. ಅದು ಸಾಧ್ಯವಾದಾಗ ತುಂಬಾ ಚೆನ್ನಾಗಿ ಆಗುತ್ತದೆ ಎಂಬ ನಂಬಿಕೆ ನನಗಿದೆ.

ಇನ್ನೊಂದು ಸಿನಿಮಾ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಘೋಷಣೆಯಾಗುತ್ತದೆ.

◆ **ನೀವು ಗಮನಿಸಿದಂತೆ ಕನ್ನಡ ಸಿನಿಮಾರಂಗದಲ್ಲಿ ಏನೇನು ಬದಲಾವಣೆಯಾಗಿದೆ?**

ಚಿಕ್ಕ ವಯಸ್ಸಿನಿಂದ ಕನ್ನಡ ಸಿನಿಮಾಗಳೊಂದಿಗೆ ಬೆಳೆದವಳು ನಾನು. ನನ್ನ ತಾತ ತುಂಬಾ ಸಿನಿಮಾಗಳನ್ನು ನೋಡುತ್ತಿದ್ದರು. ನಾನೂ ಬೇಸಿಗೆ ರಜೆಗೆ ಹೋದರೆ, ಸಿನಿಮಾ ನೋಡುವುದೇ ಕೆಲಸವಾಗಿತ್ತು. ಈಗ ಕನ್ನಡ ಸಿನಿಮಾದ ಎಸೆನ್ಸ್ ಮತ್ತೆ ಕಾಣಿಸಿಕೊಳ್ಳುತ್ತಿದೆ. ಕಥೆಯಲ್ಲಿ, ಪಾತ್ರಗಳಿಗೆ ಮನ್ನಣೆ ನೀಡುವುದರಲ್ಲಿ ಬಹಳ ಬದಲಾವಣೆಯಾಗಿದೆ. ಆ ಬದಲಾವಣೆ ಒಳ್ಳೆಯದೇ ಆಗಿದೆ.

◆ **‘ಪ್ಯಾನ್ ಇಂಡಿಯಾ’ ಸಿನಿಮಾಗಳು ಪ್ರಾದೇಶಿಕ ಸಿನಿಮಾಗಳಿಗೆ ಹೇಗೆ ಪೂರಕವಾಗಿವೆ?**

ಪ್ಯಾನ್ ಇಂಡಿಯಾದಿಂದ ಬಿಸಿನೆಸ್ ಅಭಿವೃದ್ಧಿಯಾಗುತ್ತಿದೆ. ದೊಡ್ಡ ಮಟ್ಟದ ಪ್ರೇಕ್ಷಕರು ಸಿಗುತ್ತಿದ್ದಾರೆ. ಯಾವುದೇ ಕಲೆಯ ಬಹುಮುಖ್ಯ ಗುರಿ, ಎಷ್ಟು ಸಾಧ್ಯವೋ ಅಷ್ಟು ಜನರಿಗೆ ತಲುಪಿಸಬೇಕು ಎನ್ನುವುದು. ನನ್ನ ಆಸೆಯೂ ಅದೇ. ಕನ್ನಡದಲ್ಲಿ ಅಂಥ ಪ್ರಯತ್ನಗಳು ನಡೆಯುತ್ತಿರುವುದು ಖುಷಿ ವಿಷಯ. ■



# ಹೋರಾಟಕ್ಕಿಳಿದ ಸಲಗ

‘ಸಲಗ’ ಸಿನಿಮಾ ನಂತರ ನಿರ್ದೇಶನದಲ್ಲೂ ತೊಡಗಿಕೊಂಡಿದ್ದ ನಟ ದುನಿಯಾ ವಿಜಯ್ ಇದೀಗ ಮತ್ತೊಂದು ಸಿನಿಮಾಗೆ ಸಜ್ಜಾಗಿದ್ದಾರೆ. ‘ಕಾಟೇರ’ ಚಿತ್ರದ ಬರಹಗಾರ ಹಾಗೂ ನಿರ್ದೇಶಕ ಜಡೇಶ್ ಹಂಪಿ, ವಿಜಯ್‌ಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

‘ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ’ ಎಂಬ ಟ್ಯಾಗ್‌ಲೈನ್‌ನೊಂದಿಗೆ ಜಡೇಶ್ ಮತ್ತೊಂದು ಹೋರಾಟದ ಕಥೆಯನ್ನು ಈ ಚಿತ್ರದ ಮೂಲಕ ಹೇಳಲು ಹೊರಟಿದ್ದಾರೆ.

‘ಜಂಟಲ್‌ಮ್ಯಾನ್’, ‘ಗುರು ಶಿಷ್ಯರು’ ಚಿತ್ರಗಳ ಮೂಲಕ ಗಮನ ಸೆಳೆದಿದ್ದ ಜಡೇಶ್ ಮತ್ತೊಂದು ಕಂಟೆಂಟ್ ಆಧರಿತ ಸಿನಿಮಾ ಇಟ್ಟುಕೊಂಡು ಬಂದಿದ್ದಾರೆ. ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ ‘ಭೀಮ’ ಚಿತ್ರ ಇನ್ನೂ ತೆರೆಗೆ ಬಂದಿಲ್ಲ. ಈ ನಡುವೆಯೇ ವಿಜಯ್ ಅಭಿನಯದ ಈ 29ನೇ ಸಿನಿಮಾ ಸೆಟ್ಟೇರಿದೆ. ಚಿತ್ರದ ಮೊದಲ ಪೋಸ್ಟರ್ ಬಿಡುಗಡೆಗೊಂಡಿದ್ದು, ಕತ್ತಿ ಹಾಗೂ ಕೊಡಲಿ ಹಿಡಿದು ದುನಿಯಾ ವಿಜಯ್ ನಿಂತಿದ್ದಾರೆ. ದುನಿಯಾ ವಿಜಯ್ ಮಗಳು ಕೂಡ ಈ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ.

# ಕಾಮನ್‌ಮ್ಯಾನ್ ಕಥೆ ಹೇಳಲಿದ್ದಾರೆ **ಡಾಲಿ**



ನಟ ಡಾಲಿ ಧನಂಜಯ್ ಅಭಿನಯದ ಹೊಸ ಕನ್ನಡ ಸಿನಿಮಾ ಹೆಸರು ಘೋಷಣೆಯಾಗಿದ್ದು, ಅದರಲ್ಲಿ ಕಾಮನ್‌ಮ್ಯಾನ್‌ನ ಕಥೆಯನ್ನು ಧನಂಜಯ್ ಹೇಳುತ್ತಿದ್ದಾರಂತೆ.

ಸಿನಿಮಾ ಹೆಸರು ‘ಕೋಟಿ’. ಕನ್ನಡ ಕಿರುತೆರೆಯಲ್ಲಿ ಅನುಭವ ಹೊಂದಿರುವ ಪರಮ್, ಮೊದಲ ಬಾರಿ ಸಿನಿಮಾ ನಿರ್ದೇಶನಕ್ಕೆ ಇಳಿದಿದ್ದಾರೆ. ಕೋಟಿ ಕನಸು ಕಾಣುವ ಒಬ್ಬ ಸಾಮಾನ್ಯ ಮನುಷ್ಯನ ಕಥೆ ಇದಾಗಿದ್ದು, ದುಡ್ಡಿಗಾಗಿ ಒದ್ದಾಡುವ ಒಬ್ಬ ಮನುಷ್ಯನ ಭಾವನೆಗಳನ್ನು ಈ ಸಿನಿಮಾ ಹೇಳಬಹುದು ಎಂಬ ಸುಳಿವನ್ನು ಧನಂಜಯ್ ನೀಡಿದ್ದಾರೆ.

‘ಹೊಯ್ಸಳ’ ನಂತರ ಬರುತ್ತಿರುವ ಅವರ ನಟನೆಯ ಕನ್ನಡ ಚಿತ್ರ ಇದಾಗಿದ್ದು, ವರ್ಷದ ಅಂತರದಲ್ಲಿ ಅವರ ಅಭಿನಯದ ಹೊಸ ಸಿನಿಮಾ ಘೋಷಣೆಯಾಗಿದೆ. ಡಾಲಿ ವೃತ್ತಿ ಜೀವನದಲ್ಲಿ ಈ ಸಿನಿಮಾ ಮೈಲುಗಲ್ಲಾಗಬಹುದು ಎಂಬ ನಿರೀಕ್ಷೆಯೂ ವ್ಯಕ್ತವಾಗಿದೆ.

ಕಿರುತೆರೆಯಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದ ಪರಮ್, ಈ ಸಿನಿಮಾಗೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದು ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಯುಗಾದಿ ಹಬ್ಬದ ದಿನ ಚಿತ್ರದ ಟೈಟಲ್ ಬಿಡುಗಡೆಯಾಗಿದೆ. ವಾಸುಕಿ ವೈಭವ್ ಹಾಡುಗಳನ್ನು ಸಂಯೋಜನೆ ಮಾಡಿದ್ದರೆ, ನೊಬಿನ್ ಪೌಲ್ ಹಿನ್ನೆಲೆ ಸಂಗೀತ ಕೊಟ್ಟಿದ್ದಾರೆ. ■